**<u>3 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು</u>**

**<u>ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ</u>**

**<u>C.C. No.1059/2021</u>**

**CW-3** **PW: 1**

| | |
|---|---|
| ಸಾಕ್ಷಿಯ ಹೆಸರು | ಃ ಕುಬೇರಪ್ಪ ಸವಡಿ |
| ತಂದೆ /ಗಂಡನ ಹೆಸರು | ಃ ಚ ನ್ನಪ್ಪ |
| ವಯಸ್ಸು | ಃ 64 ವರ್ಷ |
| ಉದ್ಯೋಗ | ಃ ನಿವೃತ್ತ ನೌಕರ |
| ವಾಸಸ್ಥಳ | ಃ ಪಂಚಾಕ್ಷರಿನಗರ. ಹುಬ್ಬಳ್ಳಿ. |

**ದಿಃ 04.03.2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಖ್ಯ ವಿಚಾರಣೆಃ ಎ.ಪಿ.ಪಿ. ಯವರಿಂದ ಃ**

ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿಯು ಸದರಿ ದಾಖಲೆಯಲ್ಲಿ ಇರುವ ತನ್ನ ಸಹಿಯನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದಾಖಲೆಯು ಸ್ಥಳ ಪಂಚನಾಮೆಯಾಗಿದ್ದು ಅದನ್ನು ನಿಪಿ-1 ಎಂದು ಗುರುತಿಸಲಾಗಿದ್ದುಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ನಿಪಿ-1 ನ್ನು ಹೊಡೆದಾಟದ ವಿಚಾರವಾಗಿ ನಡೆದ ಕೇಸಿನಲ್ಲಿ ಸಹಿ ಮಾಡಿರುತ್ತೇನೆ. ನಿಪಿ-1 ರಲ್ಲಿ ಇರುವ ನನ್ನ ಸಹಿಯನ್ನು 2 ನೇ ಆರೋಪಿಯ ಮನೆಯಲ್ಲಿ ದಿನಾಂಕ 15.11.2020 ರಂದು ಬೆಳಗ್ಗೆ 10 11 ಗಂಟಯ ಸರಿಯದಲ್ಲಿ ಮಾಡಿರುತ್ತೇನೆ. ನಿಪಿ-1 ಕ್ಕೆ ಸಹಿ ಮಾಡುವಾಗ ನನ್ನ ಜೊತೆ ಚಾಸಾ-2 ರವರು ಹಾಜರಿದ್ದು ಸಹಿ ಮಾಡಿರುತ್ತಾರೆ. ನಿಪಿ-1 ರ ಸಮಯದಲ್ಲಿ ನನ್ನ ಸಮಕ್ಷಮ ಹಸಿರು ಬಳೆಯ ಚೂರುಗಳನ್ನು ಅಮಾನತುಪಡಿಸಿಕೊಂಡಿರುತ್ತಾರೆ. ಸದರಿ ಹಸಿರು ಬಳೆಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಅದನ್ನು ಮು ಮಾ 1 ಎಂದು ಗುರುತಿಸಲಾಯಿತು.

**(ಈ ಹಂತದಲ್ಲಿ ಮಾನ್ಯ ಎ.ಪಿ.ಪಿ. ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಅಂತಾ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ ಎ.ಪಿ.ಪಿ. ಯವರಿಂದಃ**

ನಿಪಿ-1 ನ್ನು ಚಾಸಾ-1 ರವರು ತೋರಿಸಿದ ಸ್ಥಳದಲ್ಲಿ ಚಾಸಾ-5 ರವರು ಮನೆಯಲ್ಲಿ ಮಾಡಲಾಗಿತ್ತು ಎಂದರೆ ಸರಿ.

**(ಪಾಟೀ ಸವಾಲುಃ ಆರೋಪಿ ಪರ ವಕೀಲರು ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು, ಸಮಯಾವಕಾಶ ನೀಡಲಾಯಿತು)**

(ನನ್ನ ಉಕ್ತಲೇಖದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)
ಓ ಹೇ ಕೆ ಸರಿ ಇದೆ.

**(ಶ್ರೀಮತಿ ಶರ್ಮಿಳ ಕಾಮತ್ ಕೆ)**
**3 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**